ಪ್ರಥಮ ದರ್ಜೆಯಲ್ಲಿ ಪಾಸಾದ ಪದವೀಧರ ಅನುಸೂಚಿತ ಜಾತಿ ಮತ್ತು ಪಂಗಡ ದವರಿಗೆ ನೇರ ನೇಮಕಾತಿ

೩೭೩(೭೩೯) ಶ್ರೀ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ,—

ಅ) ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪದವೀಧರ ಅನುಸೂಚಿತ ಜಾತಿ ಹಾಗೂ ಪಂಗಡ ದವರಿಗೆ ಪ್ರಥಮ ಹಾಗೂ ದ್ವಿತೀಯ ವರ್ಗಗಳ ಹುದ್ದೆಗಳಿಗೆ ನೇರವಾಗಿ ನೇಮಕ ಮಾಡುವುದಾಗಿ ಆದೇಶ ನೀಡಿದ್ದುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ, ಈ ವರೆಗೆ ಎಷ್ಟು ಮಂದಿಗೆ ಈ ಹುದ್ದೆಗಳನ್ನು ಕೊಡಲಾಗಿದೆ ?

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎಸ್. ಆರ್ ಬೊಮ್ಮಾಯಿ (ಮುಖ್ಯ ಮಂತ್ರಿಯವರು) —

ಅ) ವಿಶ್ವವಿದ್ಯಾನಿಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲೇ ತೇರ್ಗಡೆ ಹೊಂದಿ ಅವರುಗಳಲ್ಲಿಯೇ ಪ್ರಥಮ ಅಥವಾ ದ್ವಿತೀಯ ಅಥವಾ ತೃತೀಯ ಸ್ಥಾನಗಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ರಾಜ್ಯ ಸರ್ಕಾರದ ಕೆಲವು 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವ ಯೋಜನೆಯನು ಅನುಸ್ಥಾನಗೊಳಿಸಲು ಮಾರ್ಚ್ ೧೯೮೪ರಲ್ಲಿ ಒಂದು ನಿಯಮಾವಳಿಯನ್ನು ರೂಪಿಸಲಾಯಿತು ಸದರಿ ನಿಯಮಾವಳಿಗೆ ಕೆಲವು ಪರಿಷ್ಕರಣೆಗಳ ಅವಶ್ಯಕತೆ ಕಂಡು ಬಂದ ಪ್ರಯುಕ್ತ, ಪರಿಷ್ಕೃತ ನಿಯಮಾವಳಿಯನ್ನು ದಿನಾಂಕ ೧೧-೪-೧೯೮೫ ರಂದು ಜಾರಿಗೆ ತರಲಾಯಿತು.

ಆ) ಮತ್ತು ಇ) ೧೯೮೨-೮೩ ಮತ್ತು ೧೯೮೩-೮೪ನೇ ಸಾಲಿಗೆ ಸಂಬಂದಿಸಿದಂತೆ ಮೌಖಿಕ ಪರೀಕ್ಷೆ ಮತ್ತು ಇಲ್ಲದೆ ಹಾಗೇ ನೇರವಾಗಿ ನೇಮಕ ಮಾಡಿಕೊಳ್ಳಬಹುದಾದ ಹುದ್ದೆಗಳಿಗೆ ೩೫ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಅಷ್ಟರಲ್ಲಿಯೇ ಶ್ರೇಷ್ಠ ನ್ಯಾಯಾಲಯದ ತಡೆ ಆಜ್ಞೆ ಬಂದುದಂರಿದ ಇಲ್ಲಿಯವರೆಗೆ ಯಾರನ್ನೂ ನೇಮಕಾತಿ ಮಾಡಿಲ್ಲ.

ಆನೇಕಲ್ ತಾಲ್ಲೂಕಿನ ಗೊಮಾಳ ಜಮೀನು ಸಾಗುವಳಿ

೩೧೪(೭೩೮) ಶ್ರಿ ಎಂ. ಪಿ. ಕೇಶವಮೂರ್ತಿ (ಆನೇಕಲ್).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಆನೇಕಲ್ ತಾಲ್ಲೂಕಿನಲ್ಲಿ ಗೊಮಾಳಗಳನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಆ) ಆ ರೀತಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಪ್ರಕರಣಗಳೆಷ್ಟು ಮತ್ತು ಸಾಗುವಳಿ ಮಾಡುತ್ತಿರುವವರಾರು ಮತ್ತು ಸಾಗುವಳಿಯಾಗಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಇ) ಹಾಗಿದ್ದಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಜಮೀನು ಸಕ್ರಮಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯಮಂತ್ರಿಗಳು).

ಅ) ಹೌದು

ಆ) ೮೫೮ ಪ್ರಕರಣಗಳು. ಬಹುತೇಕ ಪರಿಶಿಷ್ಟ ಜಾತಿ/ವರ್ಗ ಹಾಗೂ ಇತರೆ ಹಿಂದುಳಿದವರಾಗಿರುತ್ತಾರೆ. ಸಾಗುವಳಿ ಮಾಡುತ್ತಿರುವ ವಿಸ್ತೀರ್ಣ ಸುಮಾರು ೪೨೪೫-೦೦ ಎಕರೆಗಳು.

ಇ) ಕರ್ನಾಟಕ ಭೂ ಕಂದಾಯ ಕಾಯಿದೆ ೧೯೬೪ರ ವಿಧಿ ೪೪ಕ್ಕೆ ಕರಡು ತಿದ್ದುಪಡಿ ಮಸೂದೆಯನ್ನು ಸದನದ ಮುಂದೆ ಮಂಡಿಸಲಾಗಿದೆ. ಅದಕ್ಕೆ ಅನುಮೋದನೆ ದೊರೆತ ನಂತರ ಆ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.